ಎಂದಳು ಮೇಗಲೆ.

ಎಲ್ಲಿಂದಲೋ ಬಂದು, ಕಂಡು ಕೇಳರಿಯದ ಊರಿನಲ್ಲಿ ಹೀಗೆ ನೆಲೆ ಕಂಡುಕೊಳ್ಳುವ ಸಣ್ಣಪುಟ್ಟ ವ್ಯಾಪಾರಿಗಳ ಬಗ್ಗೆ ಮೇಗಲೆಗೆ ಸದಾ ಅಚ್ಚರಿ. ಸ್ವಲ್ಪ ಪರಿಚಯವಾಗುತ್ತಿದ್ದಂತೆ ಅವರ ಪೂರ್ವಾಪರಗಳನ್ನೆಲ್ಲ ಕೇಳಿ, ಅವರ ಒಂದು ಬಯೋಡೇಟಾವನ್ನು ಮನಸ್ಸಿನಲ್ಲಿ ತಾನೇ ಕಟ್ಟಿಕೊಂಡು ಅವರ ಚಹರೆಗೆ ಅಂಟಿಸಿಬಿಡುತ್ತಿದ್ದಳು. 'ನಾವು ನಮ್ಮ ಕಂಫರ್ಟ್ ವಲಯದಿಂದ ಆಚೆ ಹೋದ್ರೆ ನೀರಿಂದ ರಪ್ಪನೆ ತೆಗೆದು ಹಾಕಿದ ಮೀನಿನಂತೆ ಆಗತೀವಿ. ಇವರೆಲ್ಲ ಹೆಂಗೆ ತಮ್ಮದೇ ಹೊಸ ನೀರಿನ ಹರಿವನ್ನು ಕಂಡುಕೊಳ್ತಾರೆ ಅಂತ' ಎಂದು ಬೆರಗುಗಣ್ಣು ಮಾಡಿ ಹೇಳಿದಳು. ಹುಡುಗ ಅಷ್ಟರಲ್ಲಿ ಟೀ ತಂದಿಟ್ಟ. ಇಬ್ಬರೂ ತುಸು ಹೊತ್ತು ಆಫೀಸಿನ ವಿಚಾರಗಳನ್ನು ಹರಟುತ್ತ ಟೀ ಕುಡಿದರು. ಆರು ಗಂಟೆಗೆ ಒಂದೆರಡು ನಿಮಿಷವಿದ್ದಾಗ ಅಲ್ಲಿಂದ ಎದ್ದರು. ತಾನು ಸರ್ಕಲ್ಲಿನಲ್ಲಿ ರಸ್ತೆ ದಾಟಿ, ಆಚೆ ಬಲಕ್ಕೆ ಹೊರಳಿ ತನ್ನ ಮನೆಗೆ ಹೋಗಲು ಆಟೋ ಹಿಡಿಯುವುದಾಗಿ ಹೇಳಿದ ಮೇಗಲೆಯೂ ಜೊತೆಗೆ ಬಂದಳು. ಸರ್ಕಲ್ಲಿನಿಂದ ಎಡಕ್ಕೆ ಸ್ವಲ್ಪ ಮುಂದೆ ರಸ್ತೆಯಂಚಿಗೆ ರಮೇಶ ಕಾರು ನಿಲ್ಲಿಸಿದ್ದು ಕಾಣಿಸಿತು. ವಿನುತಾ ಮೇಗಲೆಯ ಕೈ ಒತ್ತಿ,'ನಿನ್ನ ಒಂಟಿತನ, ಬೇಜಾರು ಎಲ್ಲ ನಂಗರ್ಥವಾಗುತ್ತೆ ಮೇಗಲೆ. ನಾನು ಏನೇ ಹೇಳಿದ್ರೂ ಅದು ಸುಮ್ಮನೆ ಉಪದೇಶವೇ... ಆದರೆ ಹೇಗಾದ್ರೂ ಈ ಒಂಟಿತನನಾ ಮೀರಲೇಬೇಕಲ್ಲವಾ... ಅವನ ದುರಂತವೇ ನಮ್ಮದಾಗಬಾರದು ಅಂದರೆ ಏನಾದ್ರೂ ಒಂದು ಸಣ್ಣ ಕಾಲುದಾರಿಯನ್ನು ನಾವೇ ಹುಡುಕಿಕೋಬೇಕು. ಕೊನೆಗೂ ಬದುಕು ಅನ್ನೋದು ಈ ಒಂಟಿತನ, ಸೋಲು ಇವನ್ನೆಲ್ಲ ಮೀರಿದ್ದು ಅಲ್ಲವೇನೆ...' ಎಂದಳು.

'ಅದೇ ನಾನೂ ಅಂದುಕೊಳ್ಳದು... ಹ್ಯಾಗೆ ಅಂತ ಮಾತ್ರ ಗೊತ್ತಾಗ್ತಾ ಇಲ್ಲ. ಕಗ್ಗಾಡಲ್ಲಾದ್ರು ಕಾಲುದಾರಿ ಮಾಡಿಕೋಬಹುದೇನೋ. ಆದರೆ ಇದೊಂಥರಾ ಮರಳುಗಾಡು... ಎಲ್ಲಿ ಕಾಲಿಟ್ಟರೂ ಮರಳಲ್ಲಿ ಹೂತು ಹೋಗ್ತಾ ಇದೆ. ಇಲ್ಲಿ ಕಾಲುದಾರಿ ಮಾಡಿಕೊಂಡು ಸಾಗೋದು ಸುಲಭವಲ್ಲ ಕಣೇ' ಮೇಗಲೆ ಎದುರು ರಸ್ತೆಯತ್ತ ನೋಡುತ್ತಿದ್ದಳು.

'ಸರಿ, ಬರಲಾ ನಾನು...' ಎಂದು ಅವಳ ಭುಜವನ್ನು ಬಳಸಿ, 'ಟೇಕ್ ಕೇರ್, ಇನ್ನೊಂದು ಸಲ ರಾಜೋ ಜೊತೆಗೆ ಸಿಗೋಣ' ಎನ್ನುತ್ತಾ, ತನಗಾಗಿ ಕಾಯುತ್ತಿದ್ದ ರಮೇಶನ ಕಾರಿನತ್ತ ನಡೆದಳು. ತನಗಾಗಿ ಅಲ್ಲೊಬ್ಬರು ಕಾಯುತ್ತಿದ್ದಾರೆ ಎಂಬ ಭರವಸೆ ಹುಟ್ಟಿಸುವ ಒಂದು ಬಗೆಯ ನಿರಾತಂಕ ನೆಮ್ಮದಿ ವಿನುತಾಳ ಹೆಜ್ಜೆಗಂಟಿದಂತೆ, ಆ ಆತ್ಮವಿಶ್ವಾಸವೇ ನಡಿಗೆಗೊಂದು ಲಾಸ್ಯ ತುಂಬಿದಂತೆ ಹಗುರಾಗಿ ಸಾಗಿದ ಅವಳ ಬೆನ್ನನ್ನೇ ಅರೆಕ್ಷಣ ನೋಡುತ್ತಿದ್ದ ಮೇಗಲೆ, ಹೀಗೆ ತನಗಾಗಿ ಕಾಯುವ ಜೀವವೊಂದು ಇದ್ದಿದ್ದರೆ ಎಂದುಕೊಳ್ಳುತ್ತ, ಮತ್ತೆ ಮನದಲ್ಲಿ ಒಂಟಿತನದ ಚಕ್ರಸುಳಿ. ಸಿಗ್ನಲ್ ರೆಡ್ ಆಗಿ, ಇತ್ತಣ ವಾಹನಗಳ ಭರಾಟೆ ಥಟ್ಟನೆ ನಿಂತು, ರಸ್ತೆ ದಾಟಬೇಕೆಂದರೂ ಇನ್ನೊಂದು ಕಡೆಯಿಂದ ಬಲಭಾಗಕ್ಕೆ ತಿರುವು ತೆಗೆದುಕೊಂಡು ಭರ್ರನೆ ಬರುವ ವಾಹನಗಳು... ಇವಳಂತೆಯೇ ರಸ್ತೆ ದಾಟಲೆಂದು ನಿಂತಿದ್ದ ಇನ್ನೊಂದಿಬ್ಬರು... ಇವರಿಗೆ ಎಡಗೈಯಲ್ಲಿ ಬನ್ನಿ ಎಂದು ಕೈಸನ್ನೆ ಮಾಡುತ್ತಾ, ಬಲಗೈಯಲ್ಲಿ ತಿರುವು ತೆಗೆದುಕೊಳ್ಳುತ್ತಿದ್ದ ವಾಹನಗಳಿಗೆ ತುಸು ನಿಧಾನಿಸುವಂತೆ ಕೈ ಮಾಡುತ್ತಾ ಹರೆಯದ ಹುಡುಗಿಯೊಬ್ಬಳು ಮುಂದೆ ಹೆಜ್ಜೆಯಿಟ್ಟಂತೆ ಮೇಗಲೆ ಹಾಗೂ ಇನ್ನೊಂದಿಬ್ಬರು ಅವಳೊಂದಿಗೆ ಸಟಸಟನೆ ಹೆಜ್ಜೆ ಹಾಕಿದರು. ರಸ್ತೆ ದಾಟುತ್ತಿದ್ದಂತೆ ಮೇಗಲೆ ಮೆತ್ತಗೆ ಆ ಹುಡುಗಿಗೊಂದು ಥ್ಯಾಂಕ್ಸ್ ಉಸುರಬೇಕು ಎನ್ನುವಷ್ಟರಲ್ಲಿ ಆಕೆ ಕಿರುನಗೆಯೊಂದಿಗೆ ಮುಂದೆ ಸಾಗಿಯಾಗಿತ್ತು. ರಸ್ತೆಯಾಚೆ ಯಾವ ಜೀವವೂ ನಿಂತು ತನಗಾಗಿಯೇ ಕಾಯದಿದ್ದರೂ, ಹೀಗೆ ರಸ್ತೆ ದಾಟಿಸಲು ಅಪರಿಚಿತ ಜೀವಗಳು ಅಚಾನಕ್ಕಾಗಿ ಅರೆಕ್ಷಣ ಜೊತೆಯಾಗುವ ಸಾಧ್ಯತೆಗಳನ್ನು ಮಹಾನಗರ ತೆರೆದಿಡುವುದಲ್ಲ ಎಂದು ಒಂದು ಪುಟ್ಟ ಅಚ್ಚರಿಗೆ ಪಕ್ಕಾಗುತ್ತಲೇ, ಆ ದಿನ ಸೇತುವೆ ದಾಟಲು ಸಿದ್ಧಾರ್ಥನಿಗೆ ಯಾರಾದರೂ ಒಂದು ಕೈ ನೀಡಿದ್ದರೆ ಎಂಬ ತನ್ನ ಹಳಹಳಿಕೆಯ ಹೊಂಡಕ್ಕೆ ಮತ್ತೆ ಬೀಳುತ್ತಲೇ, ಈಗ ಆಟೋ ಬುಕ್ ಮಾಡುವುದೇ ಅಥವಾ ಓಡುತ್ತಿರುವ ಖಾಲಿ ಆಟೋಗೆ ಕೈ ಮಾಡುವುದೇ, ಯಾವುದರ ಚಾರ್ಜು ಸ್ವಲ್ಪ ಕಡಿಮೆಯಾಗಬಹುದು ಎಂಬ ಲೆಕ್ಕಾಚಾರದ ತನ್ನ ದೈನಿಕದ ವಾಸ್ತವಕ್ಕೂ ಮರಳಿದಳು.

●